

# ನುಸ್ರತ್ ಈಗ ಕಾಂಡೊಮ್ ಮಾರುವ ಹುಡುಗಿ

ವಿಲಕ್ಷಣವಾದ ಸಂಗತಿಗಳನ್ನು ಸಿನಿಮಾಗೆ ಅಳವಡಿಸಿ ಪ್ರೇಕ್ಷಕರನ್ನು ಚಕಿತಗೊಳಿಸುವ ಪ್ರಚಾರ ತಂತ್ರವೊಂದನ್ನು ಬಾಲಿವುಡ್ ಬಹಳ ಹಿಂದಿನಿಂದಲೂ ತೋರುತ್ತಾ ಬಂದಿದೆ. ನಟಿ ನುಸ್ರತ್ ಭರೂಚಾ ಹೊಸ ಚಿತ್ರದಲ್ಲಿ ಕಾಂಡೊಮ್ ಸೇಲ್ಸ್ ಎಕ್ಸಿಕ್ಯೂಟಿವ್ ಪಾತ್ರದಲ್ಲಿ ನಟಿಸಲಿದ್ದಾರೆ ಎನ್ನುವುದು ಅಂತಹುದೇ ಇನ್ನೊಂದು ತಂತ್ರ.

‘ಜನಹಿತ್ ಮೇ ಜಾರಿ’ ಎನ್ನುವುದು ಸಿನಿಮಾದ ಶೀರ್ಷಿಕೆ. ರಾಜ್ ಶಾಂಡಿಲ್ಯ ಸೃಜನಶೀಲತೆಯ ಈ ಚಿತ್ರದ ತಮ್ಮ ಪಾತ್ರದ ಬಗೆಗೆ ನುಸ್ರತ್ ಹೇಳಿರುವುದಿಷ್ಟು: ‘ಪಟ್ಟಣವೊಂದರ ಹುಡುಗಿ ನಾನು. ಕಾಂಡೊಮ್ ತಯಾರಿಸುವ ಕಂಪನಿಯಲ್ಲಿ ಕೆಲಸ ಸಿಗುತ್ತದೆ. ಅವನ್ನು ಮಾರಾಟ ಮಾಡುವ ಜವಾಬ್ದಾರಿ ನನ್ನದು. ಮೆಡಿಕಲ್ ಶಾಪ್‌ಗಳಲ್ಲಿ ಅವನ್ನು ಮಾರುವುದಲ್ಲದೆ ಜನಜಾಗೃತಿ ಮೂಡಿಸುವ ಕಾರ್ಯಕ್ರಮಗಳಲ್ಲಿ ಕೂಡ ತೊಡಗಿಸಿಕೊಳ್ಳುವಂತಹ ಪಾತ್ರವಿದು’.

ಅಮರ್ಯಾ ದಸ್ತೂರ್ ಹಾಗೂ ರವಿ ಕಿಶನ್ ಸಹನಟರಾಗಿ ಅಭಿನಯಿಸಲಿರುವ ‘ಜನಹಿತ್ ಮೇ ಜಾರಿ’ ಸಿನಿಮಾದ ಚಿತ್ರೀಕರಣ ಏಪ್ರಿಲ್‌ನಲ್ಲಿ ಪ್ರಾರಂಭವಾಗಬೇಕಿತ್ತು. ಕೋವಿಡ್ ಎರಡನೇ ಅಲೆ ವ್ಯಾಪಕವಾಗಿದ್ದರಿಂದಾಗಿ ಚಿತ್ರೀಕರಣವನ್ನು ಮುಂದೂಡಲಾಗಿದೆ. ‘ಡ್ರೀಮ್ ಗರ್ಲ್’, ‘ಅಜೀಬ್ ದಾಸ್ತಾನ್ಸ್’, ‘ಛಲಂಗ್’ ಸಿನಿಮಾಗಳ ಮೂಲಕ ವೃತ್ತಿಬದುಕನ್ನು ಗಟ್ಟಿಮಾಡಿಕೊಂಡಿರುವ ನುಸ್ರತ್ ಅವರಿಗೆ ಈ ಸಿನಿಮಾದ ಮೇಲೂ ವಿಶ್ವಾಸವಿದೆ.

‘ಡ್ರೀಮ್ ಗರ್ಲ್’ ಚಿತ್ರಕ್ಕೆ ಚಿತ್ರಕಥೆ–ಸಂಭಾಷಣೆ ಬರೆದದ್ದಲ್ಲದೆ ನಿರ್ದೇಶಕನಾಗಿಯೂ ಅನುಭವ ಪಡೆದುಕೊಂಡವರು ರಾಜ್ ಶಾಂಡಿಲ್ಯ. ಆಯುಷ್ಮಾನ್ ಖುರಾನಾ ಹೆಣ್ಣಿನ ದನಿಯಲ್ಲಿ ಮಾತನಾಡುತ್ತಾ ಗಂಡುಗಳನ್ನು ಪಟಾಯಿಸುವ ಪುಟ್ಟ ನಗರವೊಂದರ ಭಾವುಕ ಕಥಾನಕವನ್ನು ಅದು ಒಳಗೊಂಡಿತ್ತು. ನವಿರು ಹಾಸ್ಯದ ಜತೆಗೆ ಗಟ್ಟಿ ಕಥನ ಚಿತ್ರವನ್ನು ಗೆಲ್ಲಿಸಿತ್ತು.

ಸಣ್ಣಪುಟ್ಟ ನಗರಗಳ ಪರಿಸರ ಹಾಗೂ ಅಲ್ಲಿನ ಭಾವುಕ ಜಗತ್ತನ್ನೇ ಕಥೆಯ ಭಾಗವಾಗಿಸಿ, ಕಡಿಮೆ ಬಜೆಟ್‌ನಲ್ಲೇ ಸಿನಿಮಾ ಮಾಡಿ ಗೆಲ್ಲಿಸಿಕೊಡಬಲ್ಲ ನಿರ್ದೇಶಕರ ಸಾಲಿಗೆ ರಾಜ್ ಶಾಂಡಿಲ್ಯ ಅವರೂ ಸೇರಿದ್ದಾರೆ. ■



# ಜ್ವರದಲ್ಲೂ ಡೈಲಾಗ್ ಗುಂಗು

ಮೇ 19ರಂದು ನವಾಜುದ್ದೀನ್ ಸಿದ್ದಿಕಿ ಹುಟ್ಟಿದ ದಿನ. ಆ ಸಂಭ್ರಮಾಚರಣೆಯ ಸಂದರ್ಭದಲ್ಲಿ ನಟನ ಜೀವನನುಭವವನ್ನು ಕೆಲವರು ಮೆಲುಕು ಹಾಕಿದರು. ಯೂಟ್ಯೂಬ್‌ನಲ್ಲಿನ ವಿಡಿಯೊ ಒಂದರಲ್ಲಿ ನಿರ್ದೇಶಕ ಅನುರಾಗ್ ಕಶ್ಯಪ್ ಈ ನಟನ ಬದ್ಧತೆ ಹಾಗೂ ಪಾತ್ರದ ಪರಕಾಯ ಪ್ರವೇಶದ ವೈಖರಿ ಕುರಿತು ಒಂದು ಘಟನೆಯನ್ನು ನೆನಪಿಸಿಕೊಂಡರು.

‘ರಮಣ್ ರಾಘವ್ 2.0’ ಹಿಂದಿ ಸಿನಿಮಾದ ಚಿತ್ರೀಕರಣ ಮುಂಬೈನ ಹಲವು ಲೊಕೇಷನ್‌ಗಳಲ್ಲಿ ನಡೆಯಿತು. ಧಾರಾವಿಯ ಕೊಳೆಗೇರಿಯಲ್ಲೂ ಕೆಲವು ದೃಶ್ಯಗಳನ್ನು ಚಿತ್ರೀಕರಿಸಿಕೊಂಡರು. ಅಲ್ಲಿ ಶುಚಿತ್ವದ ಕೊರತೆ ಇದ್ದಿದ್ದರಿಂದ ಸೊಳ್ಳೆಗಳೂ ಇದ್ದವು. ಆ ಸಂದರ್ಭದಲ್ಲಿ ನವಾಜುದ್ದೀನ್ ಅವರಿಗೆ ಡೆಂಗಿ ಇರುವುದು ಪತ್ತೆಯಾಯಿತು. ಆಸ್ಪತ್ರೆ ಸೇರಿದರು. ನಾಲ್ಕೈದು ದಿನ ಅಲ್ಲೇ ಚಿಕಿತ್ಸೆ. ಆಗ ಅವರ ಪತ್ನಿ ಆಲಿಯಾ ಆರೈಕೆಯಲ್ಲಿ ನಿರತರಾಗಿದ್ದರು. ಅರೆಪ್ರಜ್ಞಾವಸ್ಥೆಯಲ್ಲಿರುವಂತೆ ಹಾಸಿಗೆ ಮೇಲೆ ಸುಸ್ತಾಗಿ ಮಲಗಿದ್ದ ನವಾಜುದ್ದೀನ್ ಸದಾ ಕಾಲ ಸಂಭಾಷಣೆಯನ್ನು ಬಡಿಬಡಿಸುತ್ತಲೇ ಇದ್ದರು. ಅದನ್ನು ಕೇಳಿ ಅವರ ಪತ್ನಿ ದಂಗುಬಡಿದುಹೋದರು.

ಅನುರಾಗ್ ಕಶ್ಯಪ್ ಅವರಿಗೆ ಫೋನಾಯಿಸಿ, ‘ಅವರಿಗೆ ಏನು ಮಾಡಿದ್ದೀರಿ? ಯಾವಾಗಲೂ ಸಿನಿಮಾ ಸಂಭಾಷಣೆ ಬಡಿಬಡಿಸುತ್ತಿದ್ದಾರೆ’ ಎಂದು ಆಲಿಯಾ ಹೇಳಿದಾಗ, ನಿರ್ದೇಶಕನಿಗೆ ಏನು ಹೇಳಬೇಕೋ ತೋಚಲಿಲ್ಲ.

‘ನವಾಜುದ್ದೀನ್ ಪಾತ್ರವನ್ನು ಅಕ್ಷರಮಟ್ಟಿಗೆ ಜೀವಿಸಲಾರಂಭಿಸುತ್ತಿದ್ದರು. ಆ ಚಿತ್ರದಲ್ಲಿ ದೊಡ್ಡ ಸೈಕೊಪಾಥ್ ಪಾತ್ರ ಅದು. ಅತಿ ವಿಲಕ್ಷಣ. ಅದರ ಸಂಭಾಷಣೆ ಸಹಜವಾಗಿತ್ತು. ಅದನ್ನು ಅವರು ಮನಸ್ಸಿಗೆ ಇಳಿಸಿಕೊಳ್ಳುತ್ತಿದ್ದ ಹೊತ್ತಿನಲ್ಲೇ ಡೆಂಗಿ ಅವರನ್ನು ಕಾಡಿತು. ಸಾಮಾನ್ಯವಾಗಿ ಜ್ವರ ಬಂದಾಗ ಉತ್ಸಾಹ ಕುಂದಿದರೆ ಅನೇಕರು ವಿಶ್ರಾಂತಿ ತೆಗೆದುಕೊಳ್ಳುತ್ತಾರೆ. ನವಾಜುದ್ದೀನ್ ಮನಸ್ಸು ಆಗಲೂ ವಿಶ್ರಾಂತವಾಗಿರಲಿಲ್ಲ ಎನ್ನುವುದಕ್ಕೆ ಅವರು ಚಿತ್ರದ ಸಂಭಾಷಣೆಯನ್ನು ಅಕ್ಷರಮಟ್ಟಿಗೆ ಅನುಭವಿಸುತ್ತಿದ್ದುದೇ ಸಾಕ್ಷಿ. ನನಗೂ ಆ ಪ್ರಕರಣ ಶಾಕ್ ನೀಡಿತ್ತು’ ಎಂದು ಅನುರಾಗ್ ಪ್ರತಿಕ್ರಿಯಿಸಿದ್ದಾರೆ.

■ ವಿಶಾಖ ಎನ್.